Sri A. G. RAMACHANDRA RAO.—They are expecting it very early and we are also expediting it.

Sri M. LINGANNA.—Does it or does it not have a repercussion on the pattern of education that the Government are thinking of?

Sri A. G. RAMACHANDRA RAO.—It is the same pattern.

ಶ್ರೀ ಯು. ಎಂ. ಮಾದಪ್ಪ.—ಈಗ ಹಾಲಿ ಇರತಕ್ಕಂಥ ಹೈಸ್ಕೂಲುಗಳನ್ನೇ ಮಲ್ಟಿಪರ್ಪಸ್ ಹೈಸ್ಕೂಲುಗಳನ್ನಾಗಿ ಮಾಡುವುದು ಸೂಕ್ತವಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಯಾವ ಸ್ಕೂಲುಗಳನ್ನು ಮಾಡಬೇಕು, ಹೇಗೆ ಮಾಡಬೇಕೆಂಬ್ದರ ಬಗ್ಗೆ ಡಿ.ಪಿ.ಐ.ರವರಿಗೆ ಬರೆಯಲಾಗಿದೆ. ಇವುಗಳನ್ನು ಅವರೇ ಕಾರ್ಟಿಸ್ಟಿಟ್ಯೂಟ್ ಮಾಡುತ್ತಾರೆ. ಎಲ್ಲೆ ಇವುಗಳನ್ನು ಪ್ರಾರಂಭಮಾಡಬೇಕು ಎಂಬ ವಿಷಯದಲ್ಲೆಲ್ಲ ಅವರೇ ಸಲಹೆ ಮಾಡುತ್ತಾರೆ.

Sri K. LAKKAPPA.—What is the difference between the method of education in these Multi-purpose High Schools and the method of education in our existing High Schools?

Sri A. G. RAMACHANDRA RAO.—ಸೆಕೆಂಡರಿ ಗ್ರೇಡಿನ method of education ಗೂ ಅದಕ್ಕೂ ಎಲ್ಲೂ ಸ್ವಲ್ಪಮಟ್ಟಿಗೆ ವ್ಯತ್ಯಾಸವಿದೆ. ಕೋರ್ಸಿನಲ್ಲಿ ಸ್ವಲ್ಪ ವ್ಯತ್ಯಾಸವಿದ್ದ ಹಾಗೆ ಕಾಣುತ್ತದೆ.

ಶ್ರೀ ಕೆ. ವಿ. ಬೈರೇಗೌಡ.—ಖಾಸಗೀ ಹೈಸ್ಕೂಲುಗಳನ್ನು ಗಣನೆಗೆ ತೆಗೆದುಕೊಂಡು ಈಗ ಹೆನರುಘಟ್ಟದಲ್ಲಿರುವ ಬಾಪೂ ಹೈಸ್ಕೂಲನ್ನು ಸಹ ಈ ಮಲ್ಟಿಪರ್ಪಸ್ ಹೈಸ್ಕೂಲನ್ನಾಗಿ ಪರಿವರ್ತಿಸುವುದಕ್ಕೆ ಶಿಫಾರ್ಸು ಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾವು ಶಿಫಾರ್ಸನ್ನು ಮಾಡುವುದಿಲ್ಲ. ನಮಗೆ ಶಿಫಾರ್ಸುಗಳು ಬರಬೇಕಾಗಿದೆ.

High School Building at Nagamangala.

Q.—183. Sri K. SINGARI GOWDA (Nagamangala).—

Will the Government be pleased to state:—

(*a*) whether they are aware that there is no proper accommodation for the students of Government High School at Nagamangala;

(*b*) whether any action is taken by the Government to construct the Government High School building at Nagamangala?

A.—Sri A. G. RAMACHANDRA RAO (Minister for Law and Education).—

(*a*) The High School Building Committee and the Town Municipal Council have provided a building temporarily for the High School and Classes are being conducted therein regularly.

(*b*) Action has to be taken by the High School Committee and the Town Municipal Council, Nagamangala, who have to take action to collect and to deposit a sum of Rs. 60,000 for the construction of a High School building before the work could be taken up.

ಶ್ರೀ ಕೆ. ಸಿಂಗಾರಿಗೌಡ.—ಈಗ ಈ ತರಗತಿಗಳನ್ನು ನಡೆಸುವುದಕ್ಕೆ ಅಲ್ಲಿ ತುಂಬ ತೊಂದರೆಯುಂಟಾಗಿರುತ್ತದೆಂದು ಅಲ್ಲಿನ ಮುಖ್ಯಸ್ಥರುಗಳು ಸರ್ಕಾರಕ್ಕೆ ತಿಳಿಸಿಲ್ಲವೇ?

*ಶ್ರೀ ಎ. ಜಿ. ರಾಮಚಂದ್ರರಾವ್.—ತಿಳಿಸಿದ್ದಾರೆ.

ಶ್ರೀ ಕೆ. ಸಿಂಗಾರಿಗೌಡ.—ಈಗ ಹಾಲಿ ನಡೆಸುತ್ತಿರುವ ಸ್ಕೂಲು ಯಾವುದೋ ಒಂದು ಮಂಟಪದಲ್ಲಿ ನಡೆಯುತ್ತಿದೆ ಅನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಬಂದಿದೆ.

ಶ್ರೀ ಕೆ. ಸಿಂಗಾರಿಗೌಡ.—ಸರ್ಕಾರದವರು ಇಲ್ಲಿಗೆ ಒಂದು ಶಾಲಾ ಕಟ್ಟಡವನ್ನು ಬೇಗ ಕಟ್ಟಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎ. ಜಿ. ರಾಮಚಂದ್ರರಾವ್.—ಈಗಾಗಲೇ ಆ ಹೈಸ್ಕೂಲು ಕಮಿಟಿಯವರಿಗೂ ಮತ್ತು ನಾಗಮಂಗಲ ಟೌನ್ ಮುನಿಸಿಪಲ್ ಕೌನ್ಸಿಲರ್‌ನವರಿಗೂ ಈ ಬಗ್ಗೆ ತಿಳಿಸಲಾಗಿತ್ತು. ಅವರು ಇದರ ಅಭಿವೃದ್ಧಿಗಾಗಿ ತುಂಬ ಪ್ರಯತ್ನ ಪಡುತ್ತಿದ್ದಾರೆಂದು ತಿಳಿದು ಬಂದಿದೆ.

ಶ್ರೀ ಕೆ. ಸಿಂಗಾರಿಗೌಡ.—ಈಗಾಗಲೇ ಆ ಹೈಸ್ಕೂಲು ಸಮಿತಿಯವರೂ ಮತ್ತು ಮುನಿಸಿಪಲ್ ಕೌನ್ಸಿಲ್ ನವರೂ ಅಲ್ಲಿ ಈ ಅರವತ್ತು ಸಾವಿರ ರೂಪಾಯಿಗಳನ್ನು ಶೇಖರಣೆ ಮಾಡುವುದು ಬಹಳ ಕಷ್ಟ ಸಾಧ್ಯವೇ, ಆಗುವುದಿಲ್ಲ ಎಂದು ತಮ್ಮಲ್ಲಿ ತಿಳಿಸಿಲ್ಲನೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಹೇಳಿದ್ದಾರೆ. ಆದರೆ ಒಂದು ಸಂಸ್ಥೆ ಈಗ ಪಾಗ್ಡಾನಮಾಡಿದೆ. ಸರ್ಕಾರ ಮಧ್ಯೆ ಪ್ರವೇಶ ಮಾಡುವುದಕ್ಕಾಗುವುದಿಲ್ಲ. ಹಾಗೆ ಈ ಒಂದು ಸಂದರ್ಭದಲ್ಲಿ ಪ್ರವೇಶಮಾಡಿದರೆ ಮುಂದೆ ಇಡೀ ಸಂಸ್ಥಾನದಲ್ಲೆ ಹೀಗೇ ಇರತಕ್ಕ ಸಂದರ್ಭಗಳ ಬಗ್ಗೆ ಏನು ಮಾಡಬೇಕಾದೀತು ಅನ್ನುವುದನ್ನು ಮಾನ್ಯ ಸದಸ್ಯರು ಆಲೋಚನೆ ಮಾಡಬೇಕು. ನಮ್ಮನೆ ಹಾಗೆ ಅಲ್ಲಿನ ಪರಿಸ್ಥಿತಿ ಬಹಳ ಕಷ್ಟವಾಗಿತ್ತು, ಆದುದರಿಂದ ಸರ್ಕಾರದವರು ಅನುಕೂಲ ಮಾಡಿದರು ಎಂದರೆ—ಅದು ನಮ್ಮ ಒಂದು ಪಾಲಿಸಿಗೆ ಬಹಳ ವಿರುದ್ಧವಾಗುತ್ತದೆ.

Primary Schools in Arkalgud Taluk.

Q.—355. Sri G. A. THIMMAPPA GOWDA (Arkalgud).—

Will the Government be pleased to state:—

(*a*) the total number of villages in Arkalgud Taluk; and